ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಶಾಸಕರು

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE 07/1/2020

# ರಮೇಶ್‌ಕುಮಾರ್ ಸತ್ಯ ಹರಿಶ್ಚಂದ್ರನ ಮೊಮ್ಮಗ

» **ಮಾಜಿ ಸ್ಪೀಕರ್ ವಿರುದ್ಧ ರಮೇಶ್ ಜಾರಕಿಹೊಳಿ ವಾಗ್ದಾಳಿ**

**ಗೋಕಾಕ:** ನಾವು ವಿಧಾನಸೌಧದ ಪಶ್ಚಿಮ ದ್ವಾರದಿಂದ ರಾಜೀನಾಮೆ ಕೊಡಲು ಹೋದರೆ ಸ್ಪೀಕರ್ ಪೂರ್ವ ದ್ವಾರದಿಂದ ಓಡಿಹೋದರು. ಇವರೆಲ್ಲ ಬರೀ ಮಾತಾಡ್ತಾರೆ. ಇವರು ರಾಜೀನಾಮೆ ನೀಡಲ್ಲ ಎಂದು ಅವರ ತಲೆಯಲ್ಲಿತ್ತು. ತಮ್ಮ ಮನೆಯಲ್ಲೇ ಸತ್ತಿದ್ದಾರೆ ಎಂದು ಹೇಳಿ ಓಡಿ ಹೋದ ರಮೇಶ್‌ಕುಮಾರ್ ಸತ್ಯ ಹರಿಶ್ಚಂದ್ರನ ಮೊಮ್ಮಗ ಎಂದು ಶಾಸಕ ರಮೇಶ್ ಜಾರಕಿಹೊಳಿ ವಾಗ್ದಾಳಿ ನಡೆಸಿದ್ದಾರೆ. ತಾಲೂಕಿನ ಸಾವಳಗಿ ಗ್ರಾಮದಲ್ಲಿ ಸೋಮವಾರ ಏರ್ಪಡಿಸಿದ್ದ ಕೃತಜ್ಞತಾ ಸಭೆಯಲ್ಲಿ ಮಾತನಾಡಿ, ನಾನು ಸ್ವಾರ್ಥಕ್ಕಾಗಿ ಬಂಡಾಯ ಏಳಲಿಲ್ಲ. ಸಮ್ಮಿಶ್ರ ಸರ್ಕಾರದಲ್ಲಿ ಮಂತ್ರಿಯಾಗಿದ್ದೆ. ಬೆಳಗಾವಿ ಉಸ್ತುವಾರಿಯೂ ಆಗಿದ್ದೆ. ಆ ಸರ್ಕಾರ ಮುಂದುವರಿದಿದ್ದರೆ ಯಾವ ಜನಾಂಗಕ್ಕೂ ಒಳಿತಾಗುತ್ತಿರಲಿಲ್ಲ. ಒಂದು ಕುಟುಂಬ, ಕೆಲ ಮಂತ್ರಿಗಳಿಗಾಗಿ ಸರ್ಕಾರ ಕೆಲಸ ಮಾಡುತ್ತಿತ್ತು ಎಂದು ಆರೋಪಿಸಿದರು. ನನಗೆ ಮತ ನೀಡಿದವರು, ನೀಡದವರು ಎಂದು ಭೇದಭಾವ ಎಣಿಸದೆ ಎಲ್ಲರೊಂದಿಗೆ ಸೌಹಾರ್ದಯುತವಾಗಿ ನಡೆದುಕೊಳ್ಳುತ್ತೇನೆ ಎಂದರು.